ಕಲಘಟಗಿ – ಬೆಂಗಳೂರು ನಡುವೆ ಮುಂಡಗೋಡ್ ಮಾರ್ಗವಾಗಿ ಸಂಚರಿಸುವ ಬಸ್ಸುಗಳು

464 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ಬೆಂಗಳೂರು ನಡುವೆ ಪ್ರತಿ ದಿನ ಎಷ್ಟು ಬಸ್ಸುಗಳು ಸಂಚರಿಸುತ್ತಿರುವುದು.

ಆ) ಅವುಗಳ ಪೈಕಿ ಎಷ್ಟು ಬಸ್ಸುಗಳು ಮುಂಡಗೋಡ ಮಾರ್ಗವಾಗಿ ಸಂಚರಿಸುತ್ತಿವೆ,

ಇ) ಬೆಂಗಳೂರು ನಗರಿಂದ ಕಲಘಟಗಿ ಮುಂಡಗೋಡ ಮಾರ್ಗವಾಗಿ ನೇರ ಬಸ್ ಸೌಕರ್ಯವನ್ನು ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಹಳಿಯಾಳ ಮತ್ತು ಬೆಂಗಳೂರು ನಡುವೆ ಓಡುವ ಎರಡು ಬಸ್ಸುಗಳು ಕಲಘಟಗಿ ಮಾರ್ಗವಾಗಿ ನಿತ್ಯವೂ ಸಂಚರಿಸುತ್ತಿವೆ.

ಆ) ಹಳಿಯಾಳ ಮತ್ತು ಬೆಂಗಳೂರು ನಡುವೆ ಕಲಘಟಗಿ ಮತ್ತು ಮುಂಡಗೋಡ ಮಾರ್ಗವಾಗಿ ಒಂದು ಬಸ್ಸನ್ನು ಕಾರ್ಯಾಚರಣೆಗೆ ಒಳಪಡಿಸಲಾಗುತ್ತಿದೆ.

ಇ) ಈ ಮಾರ್ಗದಲ್ಲಿ ಪ್ರಯಾಣಿಕರ ಸಂಚಾರ ಸಾಕಷ್ಟು ಪ್ರಮಾಣದಲ್ಲಿ ಇಲ್ಲದಿರುವುದರಿಂದ ನೇರ ಬಸ್ ಸೌಕರ್ಯವನ್ನು ಒದಗಿಸುವುದು ಸಮಂಜಸವಲ್ಲ ಎಂದು ಪರಿಗಣಿಸಲಾಗಿದೆ.

ಕಲಘಟಗಿ – ಹುಬ್ಬಳ್ಳಿ ನಡುವೆ ಬಸ್ಸುಗಳನ್ನು ಓಡಿಸುವುದು

466 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ಹುಬ್ಬಳ್ಳಿಗಳ ನಡುವೆ ಪ್ರತಿದಿನ ಎಷ್ಟು ಬಸ್ಸುಗಳು ಸಂಚರಿಸುತ್ತಿವೆ;

ಆ) ಪ್ರಯಾಣಿಕರ ಒತ್ತಡ ಹೆಚ್ಚುತ್ತಿರುವುದರಿಂದ ಹೊಸದಾಗಿ ಇನ್ನೂ 4 ಬಸ್ಸುಗಳನ್ನು ಕಲಘಟಗಿ-ಹುಬ್ಬಳ್ಳಿ ನಡುವೆ ಓಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) 36 ಬಸ್ಸುಗಳು.

ಆ) ಈಗಾಗಲೇ ಫೆಬ್ರವರಿ ತಿಂಗಳು 1994ರಲ್ಲಿ ಒಂದು ಹೆಚ್ಚುವರಿ ಅನುಸೂಚಿಯನ್ನು ಪ್ರಾರಂಭಿಸಿದ್ದು 7 ಸುತ್ತುವಳಿ ಟ್ರಿಪ್ಪುಗಳನ್ನು ಅಳವಡಿಸಲಾಗಿದೆ.

ಕಲಘಟಗಿ ಬಸ್ ನಿಲ್ದಾಣದಲ್ಲಿ ಕುಡಿಯುವ ನೀರಿನ ಸೌಲಭ್ಯ

467 - ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಲಘಟಗಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಕುಡಿಯುವ ನೀರು, ಶೌಚಾಲಯ ಮುಂತಾದ ಸೌಲಭ್ಯಗಳನ್ನು ಒದಗಿಸದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ ಅವುಗಳನ್ನು ಅಲ್ಲಿ ಒದಗಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಭೀಮಣ್ಣ ಖಂಡ್ರೆ (ಸಾರಿಗೆ ಸಚಿವರು):

ಅ) ಇಲ್ಲ, ಒದಗಿಸಲಾಗಿದೆ.

ಆ) ಉದ್ಭವಿಸುವುದಿಲ್ಲ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸಲಾಯಿತು.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 21ನೇ ಮಾರ್ಚ್ 1994ರಂದು ನಡೆದ ವಿಧಾನಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯ ಸಭೆಯು ಪ್ರಸ್ತುತ ಅಧಿವೇಶನದಲ್ಲಿ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

ಮಂಗಳವಾರ, ದಿನಾಂಕ 22-3-1994 ರಿಂದ	1. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆ
ಗುರುವಾರ, ದಿನಾಂಕ 24-3-1994 ರವರೆಗೆ	2. ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ
ಶುಕ್ರವಾರ, ದಿನಾಂಕ 25-3-1994	1. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆ 2. ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ 3. ಖಾಸಗಿ ಕಾರ್ಯಕಲಾಪಗಳು.
ಸೋಮವಾರ, ದಿನಾಂಕ 28-3-1994	1. ಪ್ರಶ್ನೆಗಳು, ಗಮನ ಸೆಳೆಯುವು ಸೂಚನೆ 2. ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ
ಮಂಗಳವಾರ, ದಿನಾಂಕ 29-3-1994	1. ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ
ಬೆಳಿಗ್ಗೆ 10.00 ಗಂಟೆಯಿಂದ 1.00 ಗಂಟೆಯವರೆಗೆ	2. ಧನವಿನಿಯೋಗ ವಿಧೇಯಕ ಹಾಗೂ ವಿತ್ತೀಯ ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.
ಮಧ್ಯಾಹ್ನ 2-30 ಗಂಟೆಯಿಂದ 6-00 ಗಂಟೆಯವರೆಗೆ	3. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆಗಳು
ಬುಧವಾರ, ದಿನಾಂಕ 30-3-1994	1. ಪ್ರಶ್ನೆಗಳು, ಗಮನ ಸೆಳೆಯುವ ಸೂಚನೆ 2. 1993-94ನೇ ಸಾಲಿಗೆ ಸಂಬಂಧಿಸಿದ ಪೂರಕ ಅಂದಾಜುಗಳ (ಅಂತಿಮ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. 3. ಶಾಸನ ರಚನೆ: ವಿಧೇಯಕಗಳನ್ನು ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು.